## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 699 |
| ಉತ್ತರಿಸಬೇಕಾದ ದಿನಾಂಕ | : | 12.07.2023 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ವಸತಿ ಇಲಾಖೆಯಿಂದ ಕೈಗೊಂಡಿರುವ ಯೋಜನೆಗಳಾವುವು ; ಪ್ರಸ್ತುತ ಈ ಯೋಜನೆಗಳು ಯಾವ ಹಂತದಲ್ಲಿದೆ; | (ಕೆಳಗೆ ನೋಡಿ) |

2020-2021 ರಿಂದ 2022-2023ನೇ ಸಾಲಿನವರೆಗೆ ವಸತಿ ರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳ ವಿವರ ಇಂತಿದೆ.

- ಬಸವ ವಸತಿ ಯೋಜನೆ
- ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ & ನಗರ)
- ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ)
- ವಾಜಪೇಯಿ ನಗರ ವಸತಿ ಯೋಜನೆ
- ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ & ನಗರ)
- ಮುಖ್ಯಮಂತ್ರಿಗಳ ಬಹುಮಹಡಿ ಬೆಂಗಳೂರು ವಸತಿ ಯೋಜನೆ

ವಿವಿಧ ವಸತಿ ಯೋಜನೆಗಳಡಿ ವಸತಿ ರಹಿತರಿಗೆ ಪ್ರತಿ ವರ್ಷ ಸರ್ಕಾರವು ನೀಡಲಾಗುವ ಆಯವ್ಯಯ ಗುರಿಗೆ ಅನುಗುಣವಾಗಿ ವಸತಿ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.

**2020-2021 ರಿಂದ 2022-23ನೇ ಸಾಲಿನವರೆಗೆ ಮಂಜೂರಾದ ಗುರಿಯ ಪ್ರಗತಿ ವಿವರ ಈ ಕೆಳಗಿನಂತಿದೆ:**

| ಯೋಜನೆ | ಮೂಲ ಗುರಿ | ಪರಿಷ್ಕೃತ ಗುರಿ | ಅನುಮೋದನೆ | ಪೂರ್ಣ | ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು | ತಾತ್ಕಾಲಿಕವಾಗಿ ತಡೆಹಿಡಿಯಲಾದ ಮನೆಗಳು |
|---|---|---|---|---|---|---|---|
| **ಫಲಾನುಭವಿಗಳು ಸ್ವತ: ನಿರ್ಮಾಣ ಮಾಡಿಕೊಳ್ಳುತ್ತಿರುವ ಮನೆಗಳು** | | | | | | | |
| ಬಸವ ವಸತಿ | 318702 | 318702 | 183469 | 44035 | 73650 | 64727 | 1057 |
| ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ (ಗ್ರಾ) | 121365 | 114652 | 61898 | 12105 | 24881 | 23774 | 1138 |
| ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ (ನ) | 21810 | 12566 | 6777 | 393 | 2814 | 3461 | 109 |
| ದೇವರಾಜು ಅರಸು ವಸತಿ -ಗ್ರಾಮ | 76361 | 71411 | 30763 | 6743 | 6373 | 17067 | 580 |
| ದೇವರಾಜು ಅರಸು ವಸತಿ -ನಗರ | 3817 | 3817 | 87 | 4 | 21 | 62 | 0 |
| ಪ್ರಧಾನಮಂತ್ರಿ ಆವಾಸ್ (ಗ್ರಾಮ) | 141391 | 141391 | 55248 | 11 | 0 | 55237 | 0 |
| ವಾಜಪೇಯಿ ನಗರ ವಸತಿ | 50000 | 31803 | 17987 | 1437 | 7827 | 8565 | 158 |
| ಪಿಎಂಎವೈ-ನಗರ-BLC-Non Convergence | 11948 | 11948 | 11948 | 3449 | 3524 | 4975 | 0 |
| ಒಟ್ಟು | 745394 | 706290 | 368177 | 68177 | 119090 | 177868 | 3042 |
| **ನಿರ್ಮಾಣ ಸಂಸ್ಥೆಗಳ ಮೂಲಕ ನಿರ್ಮಾಣ ಮಾಡಲಾಗುತ್ತಿರುವ ಮನೆಗಳು (AHP)** | | | | | | | |
| ಪಿಎಂಎವೈ-ನಗರ-AHP | 45267 | 45267 | 45267 | 4501 | 18446 | 22320 | 0 |
| CM-1ಲಕ್ಷ | 60000 | 60000 | 53951 | 5647 | 41831 | 6473 | 0 |
| ಒಟ್ಟು | 105267 | 105267 | 99218 | 10148 | 60277 | 28793 | 0 |

| | | |
|---|---|---|
| ಆ) | ಯಾವ ಕಾಲ ಮಿತಿಯೊಳಗೆ ಈ ಯೋಜನೆಗಳನ್ನು ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ ; ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು : | **<u>ಫಲಾನುಭವಿಗಳು ಸ್ವತ: ನಿರ್ಮಾಣ ಮಾಡಿಕೊಳ್ಳುತ್ತಿರುವ ಮನೆಗಳು (BLC)</u>**<br><br>ವಿವಿಧ ವಸತಿ ಯೋಜನೆಗಳಡಿ ವಸತಿ ಸೌಕರ್ಯಕ್ಕೆ ಆಯ್ಕೆಯಾಗುವ ಫಲಾನುಭವಿಗೆ ಅನ್-ಲೈನ್ ನಲ್ಲಿ ಗುರಿ ನಿಗಧಿಪಡಿಸಿ ಅಂತಿಮ ಅನುಮೋದನೆಗೊಂಡು ಕಾಮಗಾರಿ ಆದೇಶ ನೀಡಿದ ಮೂರು ತಿಂಗಳೊಳಗಾಗಿ ಮನೆಯ ಕಾಮಗಾರಿಯನ್ನು ಪ್ರಾರಂಭಿಸಿ ಒಂದು ವರ್ಷದೊಳಗಾಗಿ ಪೂರ್ಣಗೊಳಿಸಬೇಕಿರುತ್ತದೆ. ಆದರೆ ಫಲಾನುಭವಿಗಳೇ ಸ್ವತಃ ಮನೆ ನಿರ್ಮಾಣ ಮಾಡಿಕೊಳ್ಳುವುದರಿಂದ ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ಮನೆಯನ್ನು ನಿರ್ಮಿಸಿಕೊಳ್ಳಲು ವಿಳಂಭವಾಗುತ್ತಿದ್ದು, ಅಂತಹ ಸಂದರ್ಭಗಳಲ್ಲಿ ಸ್ಥಳೀಯ ಮಟ್ಟದ ಅಧಿಕಾರಿಗಳ ಜೊತೆ ವಿಡಿಯೋ ಸಂವಾದದ ಮೂಲಕ ಪ್ರಗತಿ ಪರಿಶೀಲನೆ ನಡೆಸಿ ಹಾಗೂ ಪ್ರಗತಿ ಕುಂಠಿತವಾಗಿರುವ ಜಿಲ್ಲೆಗಳಿಗೆ ಭೇಟಿ ನೀಡಿ ಫಲಾನುಭವಿಗಳಿಗೆ ಮನೆ ನಿರ್ಮಾಣ ಮಾಡುವಲ್ಲಿ ಇರುವಂತಹ ಸಮಸ್ಯೆಗಳನ್ನು ಸರಿಪಡಿಸಿ, ಮನವರಿಕೆ ಮಾಡಿ ಮನೆ ನಿರ್ಮಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>**<u>ನಿರ್ಮಾಣ ಸಂಸ್ಥೆಗಳ ಮೂಲಕ ನಿರ್ಮಾಣ ಮಾಡಲಾಗುತ್ತಿರುವ ಮನೆಗಳು (AHP)</u>**<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆಯ AHP ಘಟಕದಡಿ ವಿವಿಧ ಅನುಷ್ಠಾನ ಸಂಸ್ಥೆಗಳಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ನಿರ್ಮಾಣ ಕಾಮಗಾರಿಯನ್ನು ಕಾಮಗಾರಿ ಆದೇಶ ನೀಡಿದ ದಿನದಿಂದ 24 / 27 ತಿಂಗಳುಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.<br><br>2020-2021 ರಿಂದ 2022-23ನೇ ಸಾಲಿನ ಮನೆಗಳಿಗೆ 2020-21 ರಿಂದ 2023-24ನೇ ಆರ್ಥಿಕ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ (ಬಿ.ಎಲ್.ಸಿ ಘಟಕದಡಿ) ಜಿಪಿಎಸ್ ಪ್ರಗತಿಗೆ ಅನುಗುಣವಾಗಿ ಆಧಾರ್ ಆಧಾರಿತ ಬ್ಯಾಂಕ್ ಖಾತೆಗಳಿಗೆ ಒಟ್ಟು ರೂ.1542.01ಕೋಟಿಗಳನ್ನು ಹಾಗೂ ಪ್ರಧಾನ ಮಂತ್ರಿ ಅವಾಸ್ ಯೋಜನೆ (ನಗರ) – ಎ.ಹೆಚ್.ಪಿ ಘಟಕದಡಿ ನಿರ್ಮಾಣ ಏಜೆನ್ಸಿಗಳ ಅರ್ಹತೆಗಳಿಗೆ ಅನುಗುಣವಾಗಿ ರೂ.2419.00ಕೋಟಿಗಳನ್ನು ಹೀಗೆ ಒಟ್ಟು ರೂ.3961.01 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |
| ಇ) | ಈ ಯೋಜನೆಗಳು ಮುಕ್ತಾಯಗೊಳ್ಳುವ ಪೂರ್ವದಲ್ಲಿ ಹೊಸ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ ; | ಸರ್ಕಾರದ ಮುಂದೆ ಹೊಸ ಯೋಜನೆಗಳನ್ನು ಜಾರಿಗೆ ತರುವ ಪ್ರಸ್ತಾವನೆ ಇರುವುದಿಲ್ಲ. ಆದುದರಿಂದ, ಹಿಂದಿನ ಯಾವುದೇ ಯೋಜನೆಗಳು ಕುಂಠಿತವಾಗುವುದಿಲ್ಲ. |
| ಈ) | ಹಾಗಿದ್ದಲ್ಲಿ, ಹಿಂದಿನ ಯೋಜನೆಗಳು ಕುಂಠಿತವಾಗುವುದಿಲ್ಲವೇ ಅಥವಾ ಅದಕ್ಕೆ ಅನುದಾನದ ಕೊರತೆ ಉಂಟಾಗುವುದಿಲ್ಲವೆ ;ಈ ಕುರಿತು ಸರ್ಕಾರದ ನಿಲುವೇನು ? | |

ಸಂಖ್ಯೆ: ವಇ 192 ಹೆಚ್‌ಎಂ 2023

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು